ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.85/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಸುರೇಶ್** | | |
| **ತಂದೆ:ಹೆಸರು** | **ಹನುಮಂತ** | **ಪಿಡಬ್ಲೂ:** | **02** |
| **ವಯಸ್ಸು** | **20 ವರ್ಷ** | **ಸಿಡಬ್ಲೂ:** | **02** |
| **ಉದ್ಯೋಗ:** | **ಚಾಲಕ** | | |
| **ವಾಸ ಸ್ಥಳ:** | **ರೈತನಗರ ಕ್ಯಾಂಪ್** | | |

ದಿನಾಂಕ 09-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ ಸ ಅ ರವರಿಂದ**

ಈ ದಿನ ನ್ಯಾಯಾಲಯದಲ್ಲಿ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-1 & 3 ರವರ ಪರಿಚಯ ಇದೆ.

ದಿ.16-12-2022 ರಂದು ಮ.3-30 ರಿಂದ 4-30 ರವರೆಗೆ ಸುಕಾಲಪೇಟೆಯಲ್ಲಿ ನನ್ನ ಸಮಕ್ಷಮ ಜಗಳದ ಸಲುವಾಗಿ ಪಂಚನಾಮೆ ಮಾಡಿದ್ದರು. ಸಾಕ್ಷಿಗೆ ನಿಪಿ-2 ಸ್ಥಳ ಪಂಚನಾಮೆಯನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ಬರೆದ ಅಂಶಗಳನ್ನು ಆ ದಿನ ಓದಿ ಹೇಳಿದ್ದು, ಆದರೆ ಈ ದಿನ ನನಗೆ ನೆನಪಿಲ್ಲ. ಸಾಕ್ಷಿಯು ಮು. ಮಾ. 1 ನ್ನು ನೋಡಿ ಅದೇ ಚಪ್ಪಲಿಯಿಂದ ಆ ದಿನ ಹೊಡೆಯುತ್ತಿದ್ದರು ಎನ್ನುತ್ತಾರೆ. ಅದನ್ನು ಆ ದಿನ ಜಗಳವಾದ ಕಾಲಕ್ಕೆ ನೋಡಿದ್ದೆ. ಜಗಳವಾದ ದಿನ ನಾನು ಚಪ್ಪಲಿಯನ್ನು ನೋಡಿದ್ದೆ, ನಂತರ ನೋಡಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲುಃಃ ಮಾನ್ಯ ಸ ಸ ಅ ರವರಿಂದಃ**

ದಿ.16-12-2022 ರಂದು ಸ್ಥಳ ಪಂಚನಾಮೆ ಮಾಡುವ ಕಾಲಕ್ಕೆ ಮು.ಮಾ. 1 ನ್ನು ವಶಪಡಿಸಿಕೊಂಡಿದ್ದರು ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

1. ಪೋಲೀಸರು ಪಂಚನಾಮೆಯ ಕಾಲಕ್ಕೆ ನೋಟೀಸು ಕೊಟ್ಟಿದ್ದರು. ನನಗೆ ನೋಟೀಸು ಕೊಟ್ಟ ದಿನಾಂಕ ನೆನಪಿಲ್ಲ. ಪಂಚನಾಮೆಯನ್ನು ಸುಕಾಲಪೇಟೆಯಲ್ಲಿ ಮಾಡಿದ್ದರು. ಪೋಲೀಸರು ನನ್ನನ್ನು 10 ರಿಂದ 10-30 ರ ಸಮಯದಲ್ಲಿ ಬಾ ಎಂದು ಕರೆದಿದ್ದರು. ನಾನು ಸ್ಥಳಕ್ಕೆ ಹೋದಾಗ 2-30 ಆಗಿತ್ತು.

2. ಈ ದಿನ ನನ್ನನ್ನು ಪೋಲೀಸರು ನ್ಯಾಯಾಲಯಕ್ಕೆ ಕರೆಸಿರುತ್ತಾರೆ.

3. ನನ್ನ ಸ್ವಂತ ಊರು ರೈತನಗರ ಕ್ಯಾಂಪ್.

4. ಜಗಳ ಆಡುತ್ತಿದ್ದುದ್ದನ್ನು ನಾನು ನೋಡಿದ್ದೆ. ಹೊಡೆಯುತ್ತಿದ್ದುದ್ದನ್ನು ನಾನು ನೋಡಿದ್ದೆ, ಆದರೆ ಯಾರು ಹೊಡೆಯುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಪೋಲೀಸರು ಜಗಳ ನೋಡಿದ್ದಕ್ಕೆ ಸಾಕ್ಷಿ ಹೇಳು ಬಾ ಎಂದು ಕರೆದಿದ್ದರು. ಜಗಳ ನೋಡಿದ್ದರ ಬಗ್ಗೆ ಪೋಲೀಸರು ನನ್ನ ಹೇಳಿಕೆ ಪಡೆದಿಲ್ಲ.

5. ಪಂಚನಾಮೆಯ ಬಗ್ಗೆ ನನಗೆ ಮಾಹಿತಿ ಇದೆ. ಪಂಚನಾಮೆ ಎಂದರೇನು ಎಂದರೆ ಸಾಕ್ಷಿಯು ಘಟನಾ ಸ್ಥಳ, ದಿನಾಂಕ & ಸಮಯವನ್ನು ಜಗಳವಾಡಿದ್ದ ಸ್ಥಳದಲ್ಲಿ ಬರೆದಿರುವುದು ಎನ್ನುತ್ತಾರೆ.

6. ಘಟನೆಯು ದಿ.16-12-2022 ರಂದು ಮ.3-30 ರಿಂದ 4-30 ರವರೆಗೆ ನಡೆದಿತ್ತು.

7. ನೀವು ಯಾವುದೇ ಪಂಚನಾಮೆಗೆ ಹೋಗಿಲ್ಲ, ನೀವು ಘಟನೆಯನ್ನು ನೋಡಿಲ್ಲ, ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ನಾನು ನೋಡಿದ್ದನ್ನು ಹೇಳಿದ್ದೇನೆ ಎನ್ನುತ್ತಾರೆ.

8. ನೀವು ಘಟನೆಯನ್ನು ನೋಡದೇ ಇದ್ದರೂ ಸಹ ಚಾಸಾ-1 ರವರು ನಿಮ್ಮ ಸ್ನೇಹಿತರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

9. ಮು. ಮಾ. 1 ರಂತಿರುವ ಚಪ್ಪಲಿ ಹಲವಾರು ಕಡೆಗೆ ಸಿಗುತ್ತವೆ ಎಂದರೆ ಸಾಕ್ಷಿಯು ಆ ದಿನ ಅವರು ಹೊಡೆದಿದ್ದರು, ನಾನು ಇದೇ ಚಪ್ಪಲಿಯನ್ನು ನೋಡಿದ್ದೆ ಎನ್ನುತ್ತಾರೆ.

10. ಘಟನಾ ಸ್ಥಳದ ಚಕ್ ಬಂದಿ ಹೇಳಲು ಆಗುವುದಿಲ್ಲ. ಪಂಚನಾಮೆಯ ಬಗ್ಗೆ ನಿಮಗೆ ಮಾಹಿತಿ ಇಲ್ಲ, ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**